
# ಆನಂದದ ಹುಡುಕಾಟ

**ಸ್ವಾಮಿ ರಾಮಕೃಷ್ಣಾನಂದ**

ಶ್ರೀರಾಮಕೃಷ್ಣ ಪರಮಹಂಸರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ರಾಮಕೃಷ್ಣಾನಂದರು (೧೮೬೩-೧೯೧೧) ಸ್ವಾಮಿ ವಿವೇಕಾನಂದರ ಆಣತಿಯಂತೆ ತಮ್ಮ ಗುರುದೇವನ ಜೀವನ, ಸಂದೇಶ ಹಾಗೂ ವೇದಾಂತದ ಆದರ್ಶಗಳನ್ನು ದಕ್ಷಿಣ ಭಾರತದಲ್ಲಿ ಪಸರಿಸಲು ಚೆನ್ನೈಗೆ ಬಂದು, ಅಲ್ಲೊಂದು ಕೇಂದ್ರವನ್ನು ತೆರೆದರು. ದಕ್ಷಿಣದಲ್ಲಿ ರಾಮಕೃಷ್ಣ ಭಾವಧಾರೆಯನ್ನು ಹರಡುವಲ್ಲಿ ಅವರ ಪಾತ್ರ ಹಿರಿದು. ತಮ್ಮ ಅವಿರತ ಪ್ರಯತ್ನದಿಂದಲೂ ಕಠಿಣ ತಪಸ್ವೀ ಜೀವನದಿಂದಲೂ, ಕರ್ಮ-ಭಕ್ತಿ-ಜ್ಞಾನಗಳ ಸಮನ್ವಯದ ಆದರ್ಶವನ್ನು ಹೊಸ ಪೀಳಿಗೆಯ ಯುವಕರ ಮುಂದಿಡುವ ಮೂಲಕ, ಅವರು ಎಲ್ಲೆಡೆ ಭಗವದ್ಭಾವದ ಹೊಸ ಚಳವಳಿಗೆ ನಾಂದಿಯಾದರು. ಆಗಸ್ಟ್ ೯ರಂದು ಅವರ ಜಯಂತಿಯನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅವರ 'Search after Happiness' ಎಂಬ ಲೇಖನದ ಅನುವಾದನವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.



ಸ್ವಾಮಿ ರಾಮಕೃಷ್ಣಾನಂದರು

ಅತಿಶ್ರೇಷ್ಠ ಜೀವಿಯಾದ ಮಾನವನಿಂದ ಹಿಡಿದು ಅತಿಚಿಕ್ಕ ಸೂಕ್ಷ್ಮಜೀವಿಯ ವರೆಗಿನ ಪ್ರತಿಯೊಂದು ಪ್ರಾಣಿಯೂ ಸುಖವನ್ನರಸಿ ಹೋಗುತ್ತಿವೆ. ಕೆಲವರು ತಮ್ಮ ತೋಳುಬಲವನ್ನೇ ನಂಬಿದ್ದಾರೆ; ಸುಖಕ್ಕಾಗಿ ಅವರು ಹೋರಾಡುತ್ತಾರೆ. ಕೆಲವರು ಪ್ರಕೃತಿಯನ್ನು ಮೀರಿ ಹೋಗಿ, ವಿಶ್ವವನ್ನು ಪೋಷಿಸುವ ಅಗೋಚರ ಶಕ್ತಿಗಳ ಮೂಲಕ ತಮ್ಮ ಆಸೆಗಳನ್ನು ಪೂರೈಸಿಕೊಂಡು ಸುಖವನ್ನು ಹೊಂದಲು ಯತ್ನಿಸುತ್ತಾರೆ. ಆದರೆ ಎಲ್ಲರೂ ತಮ್ಮ ಐದು ಇಂದ್ರಿಯಗಳ ಮೂಲಕ ಬಾಹ್ಯಜಗತ್ತಿನಲ್ಲಿ ಸುಖವನ್ನು ಅರಸುತ್ತಿರುವರು. ಸ್ವರ್ಗದಲ್ಲಿರುವ ಸುಖವೂ ಇಂಥದೇ. ಈ ಸುಖವೆಂಬುದು ಮಾನವನ ಐದು ಇಂದ್ರಿಯಗಳು ಭೌತಿಕ ಜಗತ್ತಿನೊಂದಿಗೆ ಒಂದಾಗುವುದರ ಪರಿಣಾಮವಷ್ಟೇ ಆಗಿದೆ. ಯಾವಾಗ ಅವುಗಳು ಹಾಗೆ ಒಂದಾಗುವುವೋ, ಆಗ ಅವು ಸಮಭಾವದಲ್ಲಿದ್ದರೆ, ಅದರ ಪರಿಣಾಮವೇ ಸುಖ. ಹಾಗಿಲ್ಲದೆ ಇದ್ದರೆ ಅದರ ಪರಿಣಾಮವೇ ದುಃಖ.

ಬಾಹ್ಯಜಗತ್ತಿನಲ್ಲಿ ಸುಖವನ್ನು ಹುಡುಕುವ ಎಲ್ಲರ ಅನುಭವವೂ ಇದೇ ಆಗಿದೆ. ಯಾವಾಗಲೂ ಮಾನವನು ಹೋರಾಡಬೇಕು, ಕಷ್ಟವನ್ನು ಅನುಭವಿಸಬೇಕು. ಒಂದಿಷ್ಟು ಸುಖಕ್ಕಾಗಿ ಅವನು ಅಪಾರ ದುಃಖವನ್ನು ಅನುಭವಿಸಬೇಕಾಗುವುದು. ಅಲ್ಪವನ್ನು ಗಳಿಸುವುದಕ್ಕಾಗಿ ಅವನು ಹಲವು ವಸ್ತುಗಳನ್ನು ತ್ಯಜಿಸಬೇಕಾಗುವುದು. ಸ್ವರ್ಗದಲ್ಲಿಯೂ ಇದೇ ರೀತಿ. ಸುಖಕ್ಕಾಗಿ ನಡೆಸುವ ಹುಡುಕಾಟ ಅತ್ಯಂತ ಘೋರವಾದ ಬಂಧನ; ಸ್ವರ್ಗ ಕೂಡ ಬಂಧನವೇ – ಏಕೆಂದರೆ ಅಲ್ಲಿಯೂ ಮಾನವನು ಶಾಶ್ವತವಾಗಿ ಇರಲಾರ. ನಿಮ್ಮನ್ನೇ ನೀವು ಪ್ರಶ್ನಿಸಿಕೊಳ್ಳಿ. ನಿಮಗೆ ಸ್ವಾತಂತ್ರ್ಯ, ಶಾಂತಿ, ನೆಮ್ಮದಿ, ಆನಂದ ಬೇಕೆ? ಇದೆಲ್ಲವೂ ಬೇಕೆಂದು ನೀವು ಕ್ಷಣದಲ್ಲೇ ಉತ್ತರಿಸುವಿರಿ. ಎಲ್ಲರಿಗೂ ಶಾಂತಿ ಬೇಕಾಗಿದೆ. ಆದರೆ ಇಲ್ಲೆಲ್ಲೂ ಶಾಂತಿ ಕಾಣಸದಾಗಿದೆ. ನಿಮ್ಮ ಕಾಲ ಮೇಲೆ ನೀವು ನಿಲ್ಲಬೇಕಾದರೆ ನೀವು ಹೋರಾಡಬೇಕಾಗುವುದು. ನಮ್ಮ ದೇಹದ ಪ್ರತಿಯೊಂದು ಕ್ರಿಯೆಯೂ ಹೋರಾಟವನ್ನೇ ಸೂಚಿಸುತ್ತವೆ.

ಸುಖ, ಸಂಪತ್ತು, ಆಸೆ — ಈ ದಾಹಗಳನ್ನು ಮೀರಿರುವ, ಅವನ್ನು ದಾಟಿ ಹೋಗಿರುವ ಅವಸ್ಥೆಯನ್ನೇ ಮುಕ್ತಿ ಎನ್ನುತ್ತೇವೆ. ಈ ಮೂರೂ ಮನುಷ್ಯನನ್ನು ಬಂಧಿಸುತ್ತವೆ, ಅವನನ್ನು ಜನನ-ಮರಣಗಳ ಸಂಸಾರಚಕ್ರಕ್ಕೆ ಕಟ್ಟಿ ಹಾಕುತ್ತವೆ. ಅದರಲ್ಲಿ ಬಂಧಿತವಾದ ಜೀವವು ಕೆಲವೊಮ್ಮೆ ಮೇಲಕ್ಕೆ ಹೋಗುವುದು, ಕೆಲವೊಮ್ಮೆ

ಕೆಳಕ್ಕೆ ಹೋಗುವುದು. ಅದು ಒಂದೆಡೆ ನಿಂತು ವಿರಮಿಸಲಾರದು. ಇದರಿಂದ ಅದಕ್ಕೆ ಬಿಡುಗಡೆಯಿಲ್ಲವೆ? ಖಂಡಿತ ಇದೆ. ನನ್ನನ್ನು ಕೆಳಕ್ಕೆ ತಳ್ಳುವ ಯಾರೋ ನಿಜಕ್ಕೂ ಮೇಲಿದ್ದಾರೆ. ಆ ಶಕ್ತಿ ನಿರಂಕುಶ ವ್ಯಕ್ತಿಯೆ? ಅಲ್ಲ; ಅವನು ನನ್ನ ನಿಜವಾದ ತಂದೆ; 'ನಿಜವಾದ' ಎಂದರೆ ಶಾಶ್ವತವಾಗಿ ಇರುವವನು ಎಂದರ್ಥ. ಶೂನ್ಯದಿಂದ ಯಾವುದೂ ಉದ್ಭವವಾಗದು; ಯಾವುದಾದರೂ ಇನ್ನೊಂದು ವಸ್ತುವಿನಿಂದಲೇ ಏನಾದರೂ ಹುಟ್ಟಬೇಕು. ಆದ್ದರಿಂದ ನನ್ನ ನಿಜವಾದ ತಂದೆ ಶಾಶ್ವತವಾದ ತಂದೆಯೇ ಆಗಿರಬೇಕು. ಈ ಜಗತ್ತಿಗೆ ನಾನು ನಗ್ನವಾಗಿ ಬಂದಿರುವೆ; ಯಾವುದೇ ಜಾತಿ, ಪಂಗಡಗಳಿಲ್ಲದೆ ಬಂದಿರುವೆ. ನನ್ನನ್ನು ಇಲ್ಲಿಗೆ ಆ ಶಕ್ತಿಯೇ ಕರೆ ತಂದಿದೆ. ಹಾಗಿದ್ದರೆ, ಆತನೊಂದಿಗೆ ನನ್ನ ಸಂಬಂಧವೇನು? ಪ್ರಭುವಿಗೆ ಸೇವಕನಂತೆ, ತಂದೆಗೆ ಮಗನಂತೆ. ಆದರೆ ಅವನು ನನ್ನ ಶಾಶ್ವತ ತಂದೆ; ಅವನೊಂದಿಗೆ ನನ್ನ ಸಂಬಂಧ ಶಾಶ್ವತ. ಆದ್ದರಿಂದ ನನ್ನ ನಿಜವಾದ ತಂದೆಗೆ ವಿಧೇಯನಾಗಿರುವುದು ನನ್ನ ಕರ್ತವ್ಯ; ತಾತ್ಕಾಲಿಕ ತಂದೆಗಲ್ಲ. ನನ್ನ ತಾತ್ಕಾಲಿಕ ತಂದೆ ನನ್ನ ಶಾಶ್ವತ ತಂದೆಯ ಇಚ್ಛೆಗೆ ವಿರುದ್ಧವಾಗಿ ನಡೆದುಕೊಂಡರೆ, ನಾನು ಪ್ರಹ್ಲಾದನಂತೆ ಅವನನ್ನು ಧಿಕ್ಕರಿಸಬೇಕಾಗುವುದು.

ತನ್ನ ತಂದೆಯ ಬಳಿ ಒಂದು ಕೋಟಿ ರೂಪಾಯಿ ಇದೆ ಯೆಂದು ತಿಳಿದವನು ಎಷ್ಟೊಂದು ಆನಂದಪಡುತ್ತಾನೆ! ಆದ್ದರಿಂದ ನನ್ನ ತಂದೆಯು ಇದೇ ವಿಶ್ವದ ಪ್ರಭು ಎಂಬ ತಿಳುವಳಿಕೆ ನನಗೆ ಬಂದಾಗ ನಾನು ಎಷ್ಟೊಂದು ಸಂತಸಪಡಬೇಡ! ಕುದುರೆಯ ಮರಿ ಕುದುರೆಯಾಗಿಯೆ ಹುಟ್ಟುತ್ತದೆ; ಕತ್ತೆಯ ಮರಿ ಕತ್ತೆ ಯಾಗಿಯೇ ಹುಟ್ಟುತ್ತದೆ. ಅದ ರೀತಿ, ದೇವರ ಮಗು ದೇವ ರಾಗಿಯೇ ಜನಿಸುತ್ತದೆ. ಆದ್ದರಿಂದ, ಭಗವಂತ ನನ್ನ ತಂದೆ ಯಾಗಿದ್ದರೆ, ನಾನೂ ಸಾಕ್ಷಾತ್ ದೇವರಂತೆಯೇ ಅತ್ಯುತ್ತಮನೂ, ಆನಂದಮಯನೂ ಆಗಿರಬೇಕು. ಇದನ್ನು ಅರಿತುಕೊಂಡಿದ್ದರೆ, ನಾನು ಮಹತ್ತಿನ ಕಾರಣಕ್ಕಾಗಿ ಎಲ್ಲವನ್ನೂ ತ್ಯಜಿಸಬೇಕು. ಪ್ರಾಪಂ ಚಿಕ ಸಂಬಂಧಗಳ ಕಾರಣದಿಂದ ಅಲ್ಪತನದಿಂದ ಕೂಡಿದ ಪ್ರೀತಿಗೆ ನನ್ನನ್ನು ನಾನು ಬಂಧಿಸಿಕೊಳ್ಳಬಾರದು. ನನಗೆ ನಿಜವಾದ ಆನಂದ ಬೇಕಿದ್ದರೆ, ನಾನು ಪ್ರಪಂಚದ ಅಲ್ಪ ಸುಖವನ್ನು ತ್ಯಜಿಸಬೇಕು. ಭಗವಂತನು ಚೈತನ್ಯವಾಗಿದ್ದಾನೆ; ಆದ್ದರಿಂದ ಅವನನ್ನು ನಾನು ಚೈತನ್ಯದಲ್ಲೇ ಹುಡುಕಬೇಕು. ಅವನು ಪ್ರಜ್ಞೆಯಾಗಿದ್ದಾನೆ; ಆದ್ದ ರಿಂದ ಅವನನ್ನು ನನ್ನ ಪ್ರಜ್ಞೆಯಲ್ಲಿಯೇ ನಾನು ಅರಸಬೇಕು. ಪ್ರಜ್ಞೆಯು ದೇಹವನ್ನು ಬಿಟ್ಟಾಗ, ದೇಹವು ಮೇಜು ಅಥವಾ ಕುರ್ಚಿಯಂತಾಗುವುದು. ನಿಮ್ಮ ದೇಹವನ್ನು ಜಡವಸ್ತುವಾದ ಕುರ್ಚಿಗಿಂತ ಭಿನ್ನವಾಗಿಸುವುದೇ ನಿಮ್ಮ ಪ್ರಜ್ಞೆ. ಆದರೆ ನಿಮ್ಮ ದೇಹವೇ ನೀವೆಂದು ಅದರೊಂದಿಗೆ ಎಷ್ಟರಮಟ್ಟಿಗೆ ಗುರುತಿಸಿ ಕೊಂಡಿದ್ದೀರಿ ಎಂದರೆ, ಅದೊಂದು ಭಾರವೆಂದು ನಿಮಗೆ ಅನ್ನಿಸು ವುದಿಲ್ಲ. ನಿಮ್ಮ ಬೆನ್ನ ಹಿಂದೆ ಭಾರವಿದ್ದರೆ, ಅದು ನಿಮ್ಮ ಅನುಭವಕ್ಕೆ ಬಂದೇ ಬರುವುದು. ಆದರೆ ದೇಹದ ಭಾರ ನಿಮ್ಮ ಗಮನಕ್ಕೆ ಬರುವುದಿಲ್ಲ. ಸತ್ತ ನಂತರ ದೇಹವನ್ನು ಎತ್ತಿ ನೋಡಿದರೆ, ಅದು ಭಾರವಿದೆಯೆಂದು ನಿಮಗೆ ಗೊತ್ತಾಗುವುದು. ಆದ್ದರಿಂದ, ದೇಹದ ಭಾರವನ್ನು ಇಷ್ಟೊಂದು ಸುಲಭವಾಗಿ ನೀವು ಎತ್ತಿ ಕೊಂಡು ಓಡಾಡುವುದರಿಂದ ನಿಮಗೆಷ್ಟು ಶಕ್ತಿಯಿದೆ ಎಂಬುದು ಗೊತ್ತಾಗುವುದು. ಆತ್ಮನು ಈ ಭಾರವನ್ನು ಹುಲ್ಲಿನಷ್ಟು ಹಗುರ ವಾಗಿ ಎತ್ತಿಕೊಂಡು ಓಡಾಡುವುದು.

ದೇವರು ಪ್ರಜ್ಞೆಯಿರುವ ಒಂದು ಅಸ್ತಿತ್ವವಾಗಿದ್ದರೆ, ಅವನನ್ನು ಪ್ರಜ್ಞೆಯಲ್ಲೇ ಅರಸಬೇಕು; ಆತ್ಮದಲ್ಲಿಯೇ ಅರಸಬೇಕು. ಆದ್ದ ರಿಂದ ನೀವು ನಿಮ್ಮ ಅಂತರಂಗಕ್ಕೆ ಹೋಗಬೇಕು; ಜಡವಸ್ತುವಿನ ಕಡೆಗಲ್ಲ. ಏಕೆಂದರೆ ಜಡವಸ್ತುವಿಗೆ ಪ್ರಜ್ಞೆಯಿರದು. ಮೊದಲು ಭಗವಂತನನ್ನು ನಿಮ್ಮೊಳಗೇ ನೀವು ಕಂಡುಕೊಳ್ಳಬೇಕು. ಚೈತನ್ಯವು ಚೈತನ್ಯದಲ್ಲಿ ಮಾತ್ರವೇ ಇರುವುದು. ಎಲ್ಲಿ ಚೈತನ್ಯವಿರುವುದೋ ಅಲ್ಲಿ ಜಡವಸ್ತು ಇರಲಾರದು. ಆದ್ದರಿಂದ, ನೀವು ಚೈತನ್ಯವನ್ನು ಹುಡುಕುವುದಿದ್ದರೆ, ಅದನ್ನು ಚೈತನ್ಯದಲ್ಲೇ ಹುಡುಕಬೇಕು. ಈ ಚೈತನ್ಯ ಎಲ್ಲಿದೆ? ಅಂತರಂಗದಲ್ಲಿದೆ. ಆದ ಕಾರಣ, ಭಗವಂತ ನನ್ನು ನಿಮ್ಮ ಅಂತರಂಗದಲ್ಲೇ ಹುಡುಕಬೇಕು. ದೇವರು ಪ್ರತಿ ಯೊಂದು ಜೀವಿಯ ಅಂತರಂಗದಲ್ಲೂ ನೆಲೆಸಿದ್ದಾನೆ. ಅಂಥ ಮಹಾನ್ ದೇವರು ಜೀವಿಸುವುದಾದರೂ ಎಲ್ಲಿ? ಅವನು ಮಾನವ ನಲ್ಲೇ ಜೀವಿಸಿದ್ದಾನೆ. ಅಂದರೆ, ಅವನು ಜೀವಿಸಿರುವುದು ಚೈತನ್ಯ ದಲ್ಲಿ ಎಂದರ್ಥ. ಇದೇ ನಿಜವಾದ ದೇವಾಲಯ. ಹೊರಜಗತ್ತಿನಲ್ಲಿ ಹಲವಾರು ದೇವಾಲಯಗಳಿರಬಹುದು. ಆದರೆ ಅವೆಲ್ಲ ಈ ದೇವಾಲಯದ ಛಾಯಾಚಿತ್ರಗಳಷ್ಟೆ. ದೇವಾಲಯಗಳಲ್ಲಿ ಐದು ಗೋಡೆಗಳಿವೆ – ಮಾನವನಲ್ಲಿ ಪಂಚಕೋಶಗಳಿರುವಂತೆ. ಗರ್ಭ ಗೃಹದಲ್ಲಿರುವ ದೇವರ ಬಳಿಗೆ ಹೋಗಲು ಈ ಕೋಶಗಳನ್ನು ಹಾದು ಹೋಗಬೇಕು. ಅದು ದೇವರು ನೆಲೆಸಿರುವ ಪೀಠ. ಅವನ ಬಳಿಗೆ ಹೋಗಲು ದೊಡ್ಡ ಗೋಡೆಗಳನ್ನು ಹಾದು ಹೋಗಬೇಕು, ಹೊರಗೆ ಅವನನ್ನು ಕಾಣಲಾಗದು. ಅದೇ ರೀತಿ, ಭಗವಂತನನ್ನು ಹೊರಜಗತ್ತಿನಲ್ಲಿ ನೀವು ಕಾಣಲಾರಿರಿ. ಏಕೆಂದರೆ ಅವನು ಯಾವಾ ಗಲೂ ಹೃದಯದೊಳಗೆ ಅವಿತುಕೊಂಡಿರುತ್ತಾನೆ.

ದೇವರು ನನ್ನೊಳಗೆ ಇರುವುದಾದರೆ, ನಾನು ಅವನ ಬಳಿಗೆ ಸುಲಭವಾಗಿ ಹೋಗಬಲ್ಲೆ. ಅದಕ್ಕಾಗಿ ನಾನು ಟಿಕೆಟ್ ಖರೀದಿಸ ಬೇಕಾಗಿಲ್ಲ. ನನ್ನ ಕಡೆಯಿಂದ ಅದಕ್ಕಾಗಿ ನಾನು ವಿಶೇಷ ಪ್ರಯತ್ನ ಪಡಬೇಕಾಗಿಲ್ಲ. ಆದರೂ ವಾಸ್ತವವಾಗಿ, ಇದು ಜಗತ್ತಿನಲ್ಲಿ ಅತ್ಯಂತ ಕಷ್ಟದಾಯಕವಾದ ಕೆಲಸ. ನಿಮ್ಮ ಅಂತರಂಗಕ್ಕೆ ಹೋಗುವ ಶಕ್ತಿ ನಿಮ್ಮಲ್ಲಿದ್ದರೆ, ಇಡೀ ವಿಶ್ವವನ್ನೇ ನೀವು ಆಕ್ರಮಿಸಿದಂತೆ. ಇಡೀ ಜಗತ್ತನ್ನೇ ಆಕ್ರಮಿಸಿದವರು, 'ಮಹಾನ್ ಅಲೆಕ್ಸಾಂಡರ್'ನೋ, 'ಮಹಾನ್ ನೆಪೋಲಿಯನ್'ನೋ ಅಲ್ಲ. ಅವರ ಆಕ್ರಮಣ ಕೇವಲ ತಾತ್ಕಾಲಿಕ. ಹಾಗೆ ನಿಜವಾಗಿ ಮಾಡಿದವನು ಒಬ್ಬಾತ ಬಡಗಿಯ ಮಗ; ಒಬ್ಬಾತ ಗೋವಳ.* ಅವರೇ ನಿಜವಾಗಿ

* ಏಸುಕ್ರಿಸ್ತ ಮತ್ತು ಶ್ರೀಕೃಷ್ಣ.

ಜಗತ್ತನ್ನು ಆಳುವವರು; ಅವರಿಗೆ ಅದು ಹೇಗೆ ಸಾಧ್ಯವಾಯಿತೆಂದರೆ, ಅವರು ತಮ್ಮ ಅಂತರಂಗಕ್ಕೆ ಇಳಿದರು.

ಹೀಗೆ ಅಂತರಂಗದೊಳಕ್ಕೆ ಇಳಿಯುವುದೆಂದರೇನು? ಅಂದರೆ, ಪ್ರಾಪಂಚಿಕ ಆಸಕ್ತಿಗಳಿಂದ, ಹಂಬಲಗಳಿಂದ, ಎಲ್ಲ ಬಗೆಯ ಆಸೆ ಆಕಾಂಕ್ಷೆಗಳಿಂದ ದೂರ ಹೋಗುವುದೆಂರ್ಥ. ಕೆಲವರ ಪ್ರಕಾರ ಧ್ಯಾನವೆಂದರೆ ಕನಸು ಕಾಣುವುದಕ್ಕಿಂತ ಬೇರೇನೂ ಅಲ್ಲ; ಸುಮ್ಮನೆ ಹಾಗೆ ಕೆಲಸ ಮಾಡದೆ ಕುಳಿತುಕೊಳ್ಳುವ ಬದಲು ಮನುಷ್ಯ ಏನಾದರೂ ಮಾಡಲಿ. ಎಲ್ಲರೂ ಕೆಲಸ ಮಾಡಬೇಕು. ಆದರೆ ಜಗತ್ತಿನಲ್ಲಿ ಅತ್ಯಂತ ಕಷ್ಟದಾಯಕವಾದ ಕೆಲಸವೇನು? ಕೆಲಸ ಮಾಡುವುದನ್ನು ಬಿಡುವುದೆ, ಅಥವಾ ಕೆಲಸದಲ್ಲಿ ತೊಡಗಿರುವುದೆ? ಎಷ್ಟು ಜನ ಕೆಲಸ ಮಾಡುವುದನ್ನು ಬಿಡಬಲ್ಲರು? ಯಾರೂ ಬಿಡಲಾರರು. ಹಸಿವೇ ನಿಮ್ಮನ್ನು ಹಿಂದಕ್ಕೆಳೆಯುವುದು. ಒಂದೆಡೆ ದೀರ್ಘಕಾಲ ನೀವು ಕುಳಿತುಕೊಳ್ಳಲಾರಿರಿ. ಮಾನವನೆಂದರೆ ಶ್ರೀಯುತ ಇಂಥವನು ಹಾಗೂ ಇಂಥವನು; ಅವನ ಸ್ವಭಾವವೇ ಕೆಲಸಮಾಡುವುದು; ಆದರೆ ಅವನ ಹಿಂದಿರುವ ಚೈತನ್ಯ ಎಲ್ಲ ಕೆಲಸಗಳನ್ನೂ ಮೀರಿ ನಿಂತಿದೆ. ನಾನು ನಿಮಗೆ ಹೇಳುವುದೇನೆಂದರೆ, ಈ ಸಣ್ಣ ಮಾನವನೊಳಗಿರುವ ಮಹಾನ್ ಮಾನವನನ್ನು ನಿಮ್ಮ ಅಂತರಂಗದಲ್ಲಿ ಅರಸಿ ಎಂದು. ಆದರೆ ಇದು ಅತ್ಯಂತ ಕಠಿಣವಾದ ಕೆಲಸ. ಏಕೆಂದರೆ, ಹಾಗೆ ಮಾಡುವಾಗ ನೀವು ನಿಮ್ಮ ಎಲ್ಲ ಅಲ್ಪ ಭಾವನೆಗಳನ್ನು ತ್ಯಜಿಸಬೇಕಾಗುವುದು. ಜನರು ಕೇಳುತ್ತಾರೆ: ನೀವೇಕೆ ಅಂತರಂಗಕ್ಕೆ ಇಳಿಯುತ್ತೀರಿ? ಅಲ್ಲಿ ಎಲ್ಲವೂ ಕತ್ತಲು. ಸೂರ್ಯ, ಚಂದ್ರ, ನಕ್ಷತ್ರಗಳಿಂದ ಬೆಳಗುತ್ತಿರುವ ಪ್ರಪಂಚದಲ್ಲಿ ನೀವು ಇರಬಾರದೇಕೆ? ಹೀಗೆ ನೂರಕ್ಕೆ ತೊಂಬತ್ತೊಂಬತ್ತು ಮಂದಿ ಮನುಷ್ಯರು ಬಾಹ್ಯಜಗತ್ತಿನಲ್ಲಿ ತಮ್ಮ ಪಾಡಿಗೆ ತಾವು ಇರಬಯಸುತ್ತಾರೆ. ಈ ರೀತಿ ಅವರು ಭೌತಿಕ ಜಗತ್ತಿನಲ್ಲೇ ಮುಂದುವರಿಯುತ್ತಾರೆ. ಆದ್ದರಿಂದಲೇ ಗೀತೆಯಲ್ಲಿ ಹೀಗೆ ಹೇಳಲಾಗಿದೆ: ''ಸಾವಿರಾರು ಜನರ ನಡುವೆ ಕೆಲವರು ಮಾತ್ರ ತನ್ನ ಅಂತರಂಗಕ್ಕೆ ಇಳಿದು ನೋಡುತ್ತಾರೆ, ಅಂಥವರ ನಡುವೆ ಕೆಲವರು ಮಾತ್ರ ನನ್ನನ್ನು ಕಾಣುತ್ತಾರೆ.''

ಕೆಲವರೇನೋ ಅಂತರಂಗಕ್ಕೆ ಇಳಿಯಬಲ್ಲರು; ಆದರೆ ಅಲ್ಲಿ ಅವರು ಭಯಂಕರ ಶತ್ರುವನ್ನು ಎದುರಿಸಬೇಕಾಗುವುದು – ಅದೇ, ಮನಸ್ಸು. ಅರ್ಜುನ ಕೂಡ ಹೇಳುತ್ತಾನೆ: ''ಮನಸ್ಸು ಚಂಚಲ ಹಾಗೂ ಕೊನೆಗೊಳಿಸುವ ಸ್ವಭಾವದಿಂದ ಕೂಡಿದ್ದು, ಅದನ್ನು ನಿಗ್ರಹಿಸುವುದೆಂದರೆ ವಾಯುವನ್ನು ನಿಗ್ರಹಿಸುವಷ್ಟು ಕಠಿಣ.'' ಇದಕ್ಕೆ ವಿರುದ್ಧವಾಗಿ ನೀವು ಹೋರಾಡಬೇಕು. ಹೇಗೆ ಹೋರಾಡುವುದು? ಅದಕ್ಕೆ ನೀವು ಮನಸ್ಸನ್ನು ಶುದ್ಧೀಕರಿಸಬೇಕು. ಮನಸ್ಸನ್ನು ಶುದ್ಧಗೊಳಿಸುವುದು ಹೇಗೆ? ದೇವರ ಮೇಲೆ ಭಕ್ತಿಯನ್ನು ಬೆಳೆಸಿಕೊಳ್ಳಬೇಕು. ಭಕ್ತಿಯ ಮೂಲಕ ನಾವು ಎಲ್ಲವನ್ನೂ ಸಾಧಿಸಬಹುದು. ದೇವರನ್ನು ಪೂರ್ಣ ಹೃದಯದಿಂದ ಪ್ರೀತಿಸಿದರೆ ತ್ಯಾಗ ಮಾಡುವುದು ಅತ್ಯಂತ ಸುಲಭ. ಪ್ರೀತಿಯೆಂಬುದು ಸಹಜವಾದ ಕ್ರಿಯೆ. ಎಂಥ ಮೂರ್ಖನೂ ಪ್ರೀತಿಸಬಲ್ಲ. ನಿಮ್ಮ ಪ್ರೀತಿಯನ್ನು ನೀವು ಚೈತನ್ಯದ ಕಡೆಗೆ ಹರಿಸಿದರೆ, ಅದು ನಿಮ್ಮನ್ನು ಚೈತನ್ಯದತ್ತ ಕರೆದೊಯ್ಯುವುದು. ಪ್ರಾಪಂಚಿಕ ಆಸಕ್ತಿಗಳೇ ನಿಮ್ಮನ್ನು ಹಾರುವ ಬೆಲೂನುಗಳನ್ನು ಕಟ್ಟಿಹಾಕಿದಂತೆ ಕಟ್ಟಿ ಹಾಕಿರುವುದು. ನಿಮ್ಮ ಪ್ರಾಪಂಚಿಕ ಸಂಬಂಧಗಳಿಗೆ, ಹಣ, ಆಸೆ ಆಕಾಂಕ್ಷೆ ಇತ್ಯಾದಿಗಳಿಗೆ ನೀವು ಬಂಧಿಸಲ್ಪಟ್ಟಿದ್ದೀರಿ. ಈ ಎಲ್ಲ ಬಂಧನಗಳನ್ನು ಕಿತ್ತೆಸೆಯಿರಿ, ಕೂಡಲೇ ನೀವು ಮೇಲಕ್ಕೆ ಹೋಗುವಿರಿ. ಹಸಿವಿನಿಂದ ಕಂಗೆಟ್ಟ ಮಗು ತಾಯಿಯ ಬಳಿಗೆ ಓಡಿಹೋಗುವಂತೆ ನೀವು ದೇವರ ಮೇಲೆ ಪ್ರೀತಿಯನ್ನು ವೃದ್ಧಿಗೊಳಿಸುತ್ತ ಹೋಗಬೇಕು. ಆಗ ನೀವು ದೇವರ ಬಳಿಗೆ ಓಡಿಹೋಗುವಿರಿ; ಅವನನ್ನು ಕಂಡುಕೊಳ್ಳುವಿರಿ. ಆಗ ಏನಾಗುವುದು? ಇಡೀ ಪ್ರಪಂಚದಲ್ಲಿ ನೀವೇ ಅತ್ಯಂತ ಸುಖಿಗಳಾಗುವಿರಿ. ನೀವು ಚಿಕ್ಕ ಮಗುವಿನಂತಾಗುವಿರಿ. ತಾಯಿ, ತಂದೆಯರು ತಮ್ಮ ಮಗುವಿನ ಗುಲಾಮರಂತೆ. ಮಗು ಯಾವುದೇ ಗಮನವಿಲ್ಲದೆ ಜವಾಬ್ದಾರಿಯಿಲ್ಲದೆ, ಎಲ್ಲಿಗೆ ಬೇಕಾದರೂ ಓಡಾಡಬಹುದು; ಆದರೆ ಹೆತ್ತವರು ಅದನ್ನು ನೋಡಿಕೊಳ್ಳಬೇಕಾಗುವುದು. ಅಂತೆಯೇ ನೀವು ಭಗವಂತನ ಮಗುವಾದರೆ, ನೀವು ದೇವರಿಗಿಂತಲೂ ಹೆಚ್ಚಿನ ಆನಂದವನ್ನು ಹೊಂದುವಿರಿ.

ಇನ್ನೊಂದು ಮಾರ್ಗವಿದೆ – ಅದೇ ವಿಚಾರಮಾರ್ಗ. ಆದರೆ ಇದು ಅತ್ಯಂತ ಕಠಿಣ. ಕೆಲವೇ ಬುದ್ಧಿಶಾಲಿಗಳು ಈ ಮಾರ್ಗವನ್ನು ಅನುಸರಿಸಬಲ್ಲರು. ಎಲ್ಲರೂ ಉಪದೇಶಿಸಿರುವುದು ಭಕ್ತಿಯನ್ನು. ಕ್ರಿಸ್ತ, ಮಹಮ್ಮದ್ ಎಲ್ಲರೂ ಭಕ್ತಿಮಾರ್ಗವನ್ನೇ ಉಪದೇಶಿಸಿದ್ದಾರೆ. ಕೆಲವರು ಮಾತ್ರ ಜ್ಞಾನಮಾರ್ಗವನ್ನು ಉಪದೇಸಿದ್ದಾರೆ — ಬುದ್ಧ ಹಾಗೂ ಶಂಕರ. ಬುದ್ಧನು ಶುದ್ಧ ಜ್ಞಾನವನ್ನು ಬೋಧಿಸಿದ. ಅವನು ಬೋಧಿಸಿದ್ದು ಎಷ್ಟೊಂದು ಕಷ್ಟವಾದದ್ದೆಂದರೆ, ಕೆಲವರು ಮಾತ್ರವೇ ಅದನ್ನು ಅರ್ಥಮಾಡಿಕೊಳ್ಳಬಲ್ಲರು. ಬುದ್ಧನು ತೀರಿಕೊಂಡ ಬಳಿಕ ಎಲ್ಲರೂ ಅವನ ಬೋಧನೆಗಳನ್ನು ತಪ್ಪಾಗಿ ಅರ್ಥಮಾಡಿಕೊಂಡರು. ಶಂಕರರು ಖಚಿತವಾದ ಮಾರ್ಗವನ್ನು ಉಪದೇಶಿಸಿದರು. ಮೊದಲು ನಿಮ್ಮ ಮನಸ್ಸನ್ನು ನೀವು ಶುದ್ಧೀಕರಿಸಿಕೊಳ್ಳಬೇಕು ಎಂದು ಅವರು ಹೇಳುತ್ತಾರೆ. ಹೀಗೆ ಮಾಡಲು ನಾಲ್ಕು ವಿಧಾನಗಳಿವೆ: ಸತ್ಯ ಮತ್ತು ಅಸತ್ಯವನ್ನು ವಿವೇಚಿಸಿ ತಿಳಿದು, ಎರಡನ್ನೂ ಪ್ರತ್ಯೇಕಿಸುವುದು. ವಿಜ್ಞಾನದ ಮೂಲಕ ಹಾಗೂ ಇತರ ಗ್ರಂಥಗಳ ಅಧ್ಯಯನದಿಂದ ಇದನ್ನು ಮಾಡಬಹುದು. ಆದರೆ ಆಧುನಿಕ ವಿಜ್ಞಾನ ನಿಮಗೆ ಇದನ್ನು ನೀಡಲಾರದು. ನೀವು ವೈದಿಕ ವಿಜ್ಞಾನವನ್ನು ಅಧ್ಯಯನ ಮಾಡಿ ಜಡವಸ್ತುವಿನಿಂದ ಆತ್ಮನನ್ನು ಬೇರ್ಪಡಿಸಲು ಕಲಿಯಬೇಕು. ಎರಡನೆಯದಾಗಿ, ಪ್ರಾಪಂಚಿಕ ಸುಖವನ್ನು ತ್ಯಜಿಸಬೇಕು. ನೀವು ಇಂದ್ರಿಯಗಳನ್ನು ನಿಗ್ರಹಿಸಬೇಕು. ಎಲ್ಲ ಬಗೆಯ ಕಷ್ಟಗಳನ್ನೂ ಸಹಿಸುತ್ತ, ಅವುಗಳ ನಿವಾರಣೆಗೆ ಗಮನ ಕೊಡಬಾರದು. ಪ್ರಾಪಂಚಿಕ ಸುಖಗಳ ಕಡೆಗೆ ಸತ್ತವರಂತಿರಬೇಕು. ಶಾಸ್ತ್ರಗಳ ಮೇಲೆ ಹಾಗೂ ಶಾಸ್ತ್ರಗಳನ್ನು ವಿವರಿಸಬಲ್ಲರ ಮೇಲೆ ನಿಮಗೆ

ಶ್ರದ್ಧೆಯಿರಬೇಕು. ಈ ಪ್ರಪಂಚವನ್ನು ನಿಮ್ಮ ಮನೆಯೆಂದು ಭಾವಿಸಬಾರದು. ನೀವು ಚೈತನ್ಯವಾಗಿದ್ದೀರಿ; ಚೈತನ್ಯದ ಧಾಮಕ್ಕೆ ಮರಳುವ ದಾರಿಯನ್ನು ನೀವು ಅರಸಬೇಕು.

ನಿಜವಾದ ಧರ್ಮವು ಸ್ವರ್ಗಕ್ಕೆ ಹೋಗುವ ದಾರಿಯನ್ನು ಕಲಿಸುವುದಿಲ್ಲ; ದೇವರ ಬಳಿಗೆ ಹೋಗುವ ದಾರಿಯನ್ನು ಕಲಿಸುತ್ತದೆ. ಹೀಗೆ ಮಾಡಲು ಈ ಅಲ್ಪ ಆತ್ಮನನ್ನು ತ್ಯಜಿಸಿ, ಅನಂತ ಆತ್ಮವನ್ನು ಕಂಡುಕೊಳ್ಳಬೇಕು. ಈ ಅನಂತ ಆತ್ಮವೇ ದೇವರು. ಮಾನವನು ಇಂದ್ರಿಯಸುಖವನ್ನು ಅರಸಬಾರದು; ದೇವರ ಬಳಿಗೆ ಅವನನ್ನು ಕರೆದೊಯ್ಯುವ ಮಾರ್ಗವನ್ನು ಅರಸಬೇಕು. ಎಲ್ಲ ಮಾನವರಲ್ಲೂ ಇಂದ್ರಿಯಸುಖದ ಬಯಕೆ ಸಹಜವಾಗಿಯೇ ಇರುವುದು. ಆದರೆ ಇದು ಮೃಗೀಯ ಬಯಕೆಯಾಗಿರಬಾರದು. ಆಸೆಯೆಂಬುದು ಒಳಿತೇ; ಆದರೆ ಅದು ತಪ್ಪು ದಾರಿ ಹಿಡಿಯಬಾರದು ಅಷ್ಟೆ. ನಮ್ಮ ಆರೋಗ್ಯವನ್ನು ನಾವು ಚೆನ್ನಾಗಿ ಕಾಪಾಡಿಕೊಳ್ಳಬೇಕು. ಏಕೆಂದರೆ, ಈ ದೇಹದ ಮೂಲಕ ನಾವು ದೇವರನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ನಾನೇಕೆ ಊಟ ಮಾಡಬೇಕು? ನಾನೇಕೆ ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸಬೇಕು? ಈ ಕಾರ್ಯಗಳು ನನ್ನ ದೇಹವನ್ನು ಕಾಪಾಡುವುವು; ಈ ಮೂಲಕ ನಾನು ದೇವರನ್ನು ಸಾಕ್ಷಾತ್ಕರಿಸಿಕೊಳ್ಳಬಲ್ಲೆ. ಈ ಕಣ್ಣುಗಳನ್ನು ನಾನೇಕೆ ಕಾಪಾಡಿಕೊಳ್ಳಬೇಕು? — ಭಗವಂತನ ಅನನ್ಯ ಸೌಂದರ್ಯವನ್ನು ಕಾಣುವುದಕ್ಕಾಗಿ.

ಪ್ರತಿಯೊಬ್ಬ ಜೀವಾತ್ಮನ ಕರ್ತವ್ಯವೇನು? ಪ್ರತಿಯೊಬ್ಬ ಮಾನವನ ಕರ್ತವ್ಯವೆಂದರೆ ಒಬ್ಬ ಕೆಲಸಗಾರನಾಗುವುದೆ? ಅಲ್ಲ; ಪ್ರತಿಯೊಬ್ಬನೂ ಸತ್ಯವನ್ನು ಕಂಡುಕೊಳ್ಳಲು ಹೋರಾಡಬೇಕು. ಸತ್ಯವನ್ನು ಕಂಡವರು ಆ ಸತ್ಯವು ಎರಡಿಲ್ಲದೆ ಏಕವೆಂದರು. ಮಾನವನ ಅಂತರಂಗದಲ್ಲಿ ನಿಜವಾದ ದೇಗುಲವಿದೆ. ಪಂಚಕೋಶಗಳೇ ಈ ದೇಗುಲದ ಐದು ಗೋಡೆಗಳು. ಹೃದಯವೇ ಗರ್ಭಗೃಹ. ಅಲ್ಲಿಯೇ ಭಗವಂತನು ನೆಲೆಸಿದ್ದಾನೆ. ಪ್ರತಿಯೊಬ್ಬ ಮಾನವನ ಗುರಿ ಹಾಗೂ ಮಾರ್ಗ ಎರಡೂ ಭಗವಂತನ ಸಾಕ್ಷಾತ್ಕಾರವೇ ಆಗಿರಬೇಕು. ಆದರೆ ಅವನ ಹಾಗೂ ಸತ್ಯದ ನಡುವೆ ಒಂದು ದೊಡ್ಡ ತಡೆಗೋಡೆಯಿದೆ. ಅದೇನು? ಅದೇ, ಮನಸ್ಸು. ಈ ತಡೆಗೋಡೆಯನ್ನು ನಿವಾರಿಸಲು ನಾವು ಮನಸ್ಸನ್ನು ಶುದ್ಧಗೊಳಿಸಬೇಕು. ತಪಸ್ಸಿನಿಂದ ಹಾಗೂ ಮನಶ್ಶುದ್ಧಿಯಿಂದ ಈ ತಡೆಗೋಡೆ ನಾಶವಾಗುವುದು; ಪರಮ ಸತ್ಯದ ಪ್ರತ್ಯಕ್ಷ ದರ್ಶನವಾಗುವುದು. ಆಗಲೇ ಅವನಿಗೆ ಶಾಶ್ವತವಾದ ಶಾಂತಿ ಹಾಗೂ ಆನಂದ ಲಭಿಸುವುದು.

## ನಾವಿಬ್ಬರೂ ಎಚ್ಚರವಾಗಿರಬೇಕೆ?

ಅದೊಂದು ಗೊಂಡಾರಣ್ಯವಾಗಿತ್ತು. ಕತ್ತಲು ಬೇರೆ. ಆಗಸದಲ್ಲೆಲ್ಲ ಮೋಡ ಆವರಿಸಿಕೊಂಡಿದೆ; ಭೀಕರ ಮೃಗಗಳ, ಜಂತುಗಳ ಕೂಗುಗಳು ಹೆದರಿಸುವಂತಿದೆ. ಒಂದು ಹೆಜ್ಜೆ ಮುಂದಿಡಲೂ ಸಾಧ್ಯವಾಗದಂತೆ ದಟ್ಟ ಮರಗಳ, ಮುಳ್ಳು, ಬಳ್ಳಿ, ಪೊದರುಗಳ ನಡುವೆ ದಾರಿ ಕಾಣಿಸುತ್ತಿರಲಿಲ್ಲ. ಒಬ್ಬಂಟಿಯಾಗಿ ಅಲ್ಲೊಬ್ಬ ದಾರಿಹೋಕ ಸಿಕ್ಕುಹಾಕಿಕೊಂಡಿದ್ದ. ದಟ್ಟ ಅರಣ್ಯವನ್ನು ಹಾದುಹೋಗಬೇಕಿದ್ದವನು, ಈಗ ಭಯಭೀತನಾದ.

''ಕಾಡು ಬಹಳ ಭಯಾನಕವಾಗಿದೆ. ಆದಷ್ಟು ಬೇಗ ನಡೆದು ದಾಟಿಬಿಡು. ಕತ್ತಲಲ್ಲಿ ಕಾಡಿನ ಮಧ್ಯೆ ಉಳಿದುಬಿಡಬೇಡ'' ಎಂದು ಹಳ್ಳಿಯ ಜನರು ಎಚ್ಚರಿಸಿದ್ದರು. ಕ್ರೂರ ಪ್ರಾಣಿಗಳಿಂದ ಕೂಡಿದ ಕಾಡಿನಲ್ಲಿ ರಾತ್ರಿ ಉಳಿಯುವುದು ಖಂಡಿತ ಸುರಕ್ಷಿತವಲ್ಲ ಎಂದು ಅವರು ಹೇಳಿದ್ದರು. ಆದರೂ ದಾರಿಹೋಕನಿಗೆ ಕಾಡನ್ನು ಹಾದುಹೋಗುವುದು ಸಾಧ್ಯವಾಗಲಿಲ್ಲ.

ದಿನವಿಡೀ ನಡೆದು ಬಸವಳಿದಿದ್ದ ಅವನು ರಾತ್ರಿಹೊತ್ತು ಕಾಡಿನ ನಡುವೆ ಎತ್ತ ಹೋಗಬೇಕೋ ಗೊತ್ತಾಗದೆ, ಭಯದಿಂದ ಕಂಗೆಟ್ಟಿದ್ದ. ಆಯಾಸದಿಂದ ನಿದ್ದೆ ಕೊಲ್ಲುತ್ತಿದೆ. ಏನು ಮಾಡಲಿ? ನೆಲದಲ್ಲಿ ಕುಸಿದು ಕುಳಿತು ದೇವರನ್ನು ಕುರಿತು ಪ್ರಾರ್ಥಿಸತೊಡಗಿದ: ''ದೇವರೇ, ಇನ್ನೊಂದು ಕ್ಷಣವೂ ನಾನು ಎಚ್ಚೆತ್ತಿರಲಾರೆ. ನೀನಾದರೋ ಯಾವಾಗಲೂ ಎಚ್ಚರವಾಗಿಯೇ ಇರುವವನು. ನಾವಿಬ್ಬರೂ ಎಚ್ಚರವಾಗಿ ಇರುವ ಅಗತ್ಯವಾದರೂ ಏನಿದೆ?'' ಹೀಗೆಂದ ಅವನು ಅಲ್ಲೇ ಮಲಗಿ ನಿದ್ರಿಸತೊಡಗಿದ.

ಅವನಿಗೆ ಎಚ್ಚರವಾದಾಗ ಅವನ ಮುಖದ ಮೇಲೆ ಬಿಸಿಲು ಬಡಿಯುತ್ತಿತ್ತು. ಪಕ್ಕದಲ್ಲೇ ಒಬ್ಬ ಕೋವಿಯೊಂದಿಗೆ ಕಾವಲು ನಿಂತಿದ್ದ. ''ನೀವು ಯಾರು ಸ್ವಾಮಿ? ಯಾರೂ ಇಲ್ಲದ ಕಾಡಿನ ಮಧ್ಯೆ ನಾನು ನಿದ್ದೆ ಮಾಡುತ್ತಿರುವಾಗ, ನೀವು ಹೇಗಾದರೂ ಇಲ್ಲಿಗೆ ಬಂದಿರಿ?'' – ಆಶ್ಚರ್ಯದಿಂದ ಕೇಳಿದ ದಾರಿಹೋಕ. ಆ ವ್ಯಕ್ತಿ, ''ನಿನ್ನೆ ನಾನು ಈ ಕಾಡಿನ ಮೂಲಕ ಹಾದುಹೋಗುತ್ತಿದ್ದೆ. ಇಲ್ಲಿ ನೋಡಿದರೆ ನೀವು ಗಾಢ ನಿದ್ರೆಯಲ್ಲಿ ಮುಳುಗಿದ್ದಿರಿ. ನಿಮಗೆ ಬಹುಶಃ ಈ ಸ್ಥಳ ಎಷ್ಟು ಭಯಂಕರವೆಂದು ಗೊತ್ತಿಲ್ಲ. ಆದ್ದರಿಂದ ನಾನು ಇಲ್ಲೇ ಕಾವಲು ನಿಂತೆ'' ಎಂದ. ದಾರಿಹೋಕನಿಗೆ ವಿಸ್ಮಯವಾಯಿತು. ''ನಾವು ಎಲ್ಲಿದ್ದರೂ, ಏನು ಮಾಡುತ್ತಿದ್ದರೂ ದೇವರು ಸದಾ ನಮಗೆ ದಾರಿ ತೋರಿ, ರಕ್ಷಣೆ ನೀಡುತ್ತಾನಲ್ಲ!'' ಎಂದು ಅವನು ಉದ್ಗರಿಸಿದ.

*(ಜೆ.ಪಿ.ವಾಸ್ವಾನಿಯವರ 'More Snacks for the Soul' ಗ್ರಂಥದಿಂದ)*